<u>ಸಾಕ್ಷಿಗೆ ದಿನಾಂಕ 17-08-2023 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 2 P.W.: 2

| | | |
|---|---|---|
| ಹೆಸರು | : | ಸೊನ್ನದ ಶ್ರೀಶೈಲಪ್ಪ |
| ತಂದೆಯ ಹೆಸರು | : | ಚನ್ನಪ್ಪ |
| ವಯಸ್ಸು | : | 71 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಹಂಪಸಾಗರ-೨ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ಚಾಸಾ-**1** ರವರ ಮನೆಯಲ್ಲಿ **2014** ನೇ ಸಾಲಿನಲ್ಲಿ ಕಳವಾಗಿದ್ದು ಏನು ಕಳ್ಳತನ್ನವಾಗಿತ್ತು ಎಂದು ನನಗೆ ಈಗ ಹೇಳಲು ನನೆಪಿರುವುದಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪೊಲೀಸರು ಪಂಚನಾಮೆಗೆ ಸಹಿ ಮಡುವಂತೆ ಹೇಳಿದ್ದು ನಾನು ಸಹಿಯನ್ನು ಮಾಡಿರುತ್ತೇನೆ. ನಿ.ಪಿ.**2** ಮತ್ತು **3** ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿ.ಪಿ**2(ಬಿ)** ಮತ್ತು **3(ಬಿ)** ಎಂದು ಗುರುತಿಸಿಲಾಯಿತು. ನಿ.ಪಿ.**4** ರಿಂದ **7** ರ ಛಾಯಾಚಿತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ ಸಾಕ್ಷಿಯು ಜಪ್ತು ಪಡಿಸಿಕೊಂಡ ವಸ್ತುಗಳನ್ನು ಬಿಡುಗಡೆ ಕಾಲಕ್ಕೆ ಮಾಡಿದಂತಹ ಪಂಚನಾಮೆಯಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಪಂಚನಾಮೆನ್ನು ನಿ.ಪಿ.**12** ಎಂದು ಸಹಿಯನ್ನು **12(ಎ)** ಎಂದು ಗುರುತಿಸಲಾಯಿತು. ಯಾವಾ-ಯಾವಾ ವಸ್ತುಗಳನ್ನು ಬಿಡುಗಡೆ ಮಾಡಲಾಯಿತೆಂದು ನನಗೆ ಈಗ ಹೇಳಲು ನನೆಪಿರುವುದಿಲ್ಲ. ಸಾಕ್ಷಿಯು **2** ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.**13** ಮತ್ತು **14** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಸಮಕ್ಷದಲ್ಲಿರುವ **2** ರಿಂದ **4** ನೇ ಆರೋಪಿತರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. **1** ನೇ ಆರೋಪಿತನ ಗೈರು ಹಾಜರಾತಿಯಲ್ಲಿ ಅವರನ್ನು ಗುರುತಿಸಲು ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.

**(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿದ್ದು ಪಾಟೀಸವಾಲಿಗೆ ಅನುಮತಿಯನ್ನು ಕೇಳಿದ್ದು ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲು. ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>

ದಿ: 14.11.2014 ರಂದು ಚಾಸಾ-21 ರವರು ನನ್ನನ್ನು ಹಾಗು ಚಾಸಾ3 ರವರನ್ನು ಚಾಸಾ1 ರವರ ಮನೆಯಲ್ಲಿ ಕಳ್ಳತನವಾದ ಬಗ್ಗೆ ಪಂಚನಾಮಗೆ ಸಹಕರಿಸುವಂತೆ ಕೇಳಿದ್ದು,

ಹಂಪಸಾಗರ-2 ಗ್ರಾಮದಲ್ಲಿರುವ ಚಾಸಾ-1 ರವರ ಮನೆಯಲ್ಲಿ ದಿ:12.12.2014 ರಂದು ಬೆಳಗ್ಗೆ 7 ರಿಂದ ಬೆಳಗ್ಗೆ 10 ಗಂಟೆಯ ಮಧ್ಯದ ಅವಧಿಯಲ್ಲಿ ಚಾಸಾ-1 ರವರ ತಂದೆ ಮಲ್ಲಪ್ಪ ರವರ ಮನೆಯ ಬಾಗಿಲಿಗೆ ಹಾಕಿದ ಬೀಗವನ್ನು ಹಾಗೂ ಕಬ್ಬಿಣದ ಚಿಲಕದ ಕೊಂಡಿಯನ್ನು ಯಾರೋ ಕಳ್ಳರು ಮುರಿದು ಮನೆಯೊಳಗೆ ಪ್ರವೇಶ ಮಾಡಿ ಮೆನಯಲ್ಲಿದ್ದ 2 ಕಬ್ಬಿಣದ ಗಾರ್ಡೇಜ್‌ಗಳನ್ನು ಮತ್ತು ಒಂದುಕಟ್ಟಿಗೆಯ ಕಪಾಟನ್ನು ಮುರಿದು 2 ಕಬ್ಬಿಣದ ಗಾರ್ಡೇಜ್‌ನಲ್ಲಿಟ್ಟದ್ದ ಒಂದು ಬಂಗಾರದ 15 ನ ಗ್ರಾಂನ ಚೈನ್ 10 ಗ್ರಾಂ.ನ 2 ಹರಳಿನ ಉಂಗುರ 6 ಗ್ರಾಂ. 1 ಜೊತೆ ಜುಮುಕಿ ಬೆಂಡೋಲೆಯನ್ನು 10 ಗ್ರಾಂ.ನ ಗೋರ್‌ಮಳ ಸರವನ್ನು 5 ಗ್ರಾಂ. ಗಟ್ಟಿ ಬಂಗಾರ ಹೀಗೆ ಒಟ್ಟು 46 ಗ್ರಾಂ. ಸುಮಾರು ರೂ. 69.000/- ಬೆಲೆ ಬಾಳುವ ಬಂಗಾರದ ವಡವೆಗಳನ್ನು, 20 ರೇಷ್ಮೆ ಸೀರೆಗಳನ್ನು, ನಗದು ಹಣ 5,500/- ನ್ನು ಕಳವು ಮಾಡಿದ ಸ್ಥಳವನ್ನು ತೋರಿಸಿದ್ದು ನನ್ನ ಸಮಕ್ಷಮ ಈ ಮಾಹಿತಿಯನ್ನು ಪೊಲೀಸರು ನನಗೆ ತಿಳಿಸಿದ್ದು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಲಾಗಿತ್ತು ಎಂದರೆ ಸರಿ. ಸದರಿ ಪಂಚನಾಮೆಯ್ನನ್ನು ಬೆಳಗ್ಗೆ 9-15 ರಿಂದ 10-15 ರವರೆಗೆ ಬರೆಯಲಾಗಿತ್ತು ಎಂದರೆ ಸರಿ. ಕೃತ್ಯ ಸ್ಥಳದಲ್ಲಿ ನಿ.ಪಿ 3 ರಂತೆ ಕಚ್ಚಾ ನಕಾಶೆಯನ್ನು ಬರೆಯಲಾಗಿತ್ತು ಎಂದರೆ ಸರಿ. ಕೃತ್ಯ ಸ್ಥಳದಲ್ಲಿ ನಿ.ಪಿ.4 ರಿಂದ 8 ರಂತೆ ಪೋಟೋಗಳನ್ನು ತೆಗಯಲಾಗಿತ್ತು ಎಂದರೆ ಸರಿ. ನನ್ನ ಸಮಕ್ಷಮ ನಿ.ಪಿ.12 ರಂತೆ ಪಂಚನಾಮೆಯನ್ನು ಮಾಡಲಾಗಿತ್ತು ಎಂದರೆ ಸರಿ.

ನಿ.ಪಿ.12 ರಂತೆ 13 ಗ್ರಾಂ. ಬಂಗಾರದ ಚೈನ್, 5 ಗ್ರಾಂ.ನ ಇನ್ನೊಂದು ಬಂಗಾರದ ಚೈನ್, 4.5 ಗ್ರಾಂ. ಒಂದು ಬಂಗಾರದ ಬೆಂಡೋಲೆ, 20 ರೇಷ್ಮೆ ಸೀರೆಗಳನ್ನು ನನ್ನ ಸಮಕ್ಷಮ ಚಾಸಾ-7 ರವರಿಗೆ ಬಿಡುಗಡೆ ಮಾಡಿ ಪಂಚನಾಮೆ ಬರೆಯಲಾಯಿತು ಎಂದರೆ ಸರಿ. ಆ ಸಮಯದಲ್ಲಿ ನಿ.ಪಿ.13 ಮತ್ತು 14 ರಂತೆ ಪೋಟೋವನ್ನು ತೆಗೆಯಲಾಗಿತ್ತು ಎಂದರೆ ಸರಿ.

ಮರು ವಿಚಾರಣೆ ಇಲ್ಲಃ

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ